ಸಾಕ್ಷಿಗೆ ದಿನಾಂಕಃ06.10.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಶ್ರೀ ಹೆಚ್.ವಿ.ಪಿ. ವಕೀಲರಿಂದ:**

ನಾನು 3ನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿಯು ನನಗೆ ಸುಮಾರು 20 ರಿಂದ 30 ವರ್ಷಗಳಿಂದ ಗೊತ್ತಿದ್ದು, ಅವರು ಮತ್ತು ನಾನು ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿದ್ದೆವು. ಆರೋಪಿಯು ನನಗೆ ಸ್ನೇಹಿತ ಸಹ ಆಗಿರುತ್ತಾರೆ. ನಾನು ಮತ್ತು ಅವರು ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿದ್ದ ಕಾರಣ ಸ್ನೇಹಿತ ಆಗಿರುತ್ತಾರೆ. ನಾನು ಶಿಂಷಾ ಮತ್ತು ಬ್ಲಫ್‌ನಲ್ಲಿ ಕೆಲಸ ಮಾಡಿರುತ್ತೇನೆ. ನಾನು ಶಿಂಷಾದಲ್ಲಿ 28 ವರ್ಷ ಮತ್ತು ಬ್ಲಫ್‌ನಲ್ಲಿ 3 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ರೀತಿ ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ಕಷ್ಟವಾಗುತ್ತದೆ. ದಾಖಲೆಗಳು ಈಗ ಮೈಸೂರಿನಲ್ಲಿ ಇರುತ್ತವೆ. ಆರೋಪಿಯು ಬ್ಲಫ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಾನು ಕೆ.ಪಿ.ಟಿ.ಸಿ.ಎಲ್‌ನಲ್ಲಿ ಠಾಣೆಯ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆ. ನಾನು ತ್ಯಾಜ್ಯವನ್ನು ತೆಗೆದುಹಾಕುವ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

2. ನಾನು ಶಿಂಷಾದಲ್ಲಿ ಕರ್ತವ್ಯ ನಿರ್ವಹಿಸುವಾಗ ಅರೋಪಿಯ ಪರಿಚಯ ಆಗಿರುತ್ತದೆ. ನಾನು ಬ್ಲಫ್‌ಗಹೆ ಹೋಗುತ್ತಿದ್ದೆ, ಮಳವಳ್ಳಿಗೆ ಬರುವಾಗ ಆರೋಪಿಯು ಕನಕರಾಜು ಎಂಬುವವರ ಜೊತೆ ಬರುತ್ತಿದ್ದರು. ನನಗೆ ಕನಕರಾಜು ಮಾತ್ರ ಪರಿಚಯವಿದ್ದು, ಆರೋಪಿಯ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಸ್ವಂತ ಊರು ಬಂಡೂರು ಆಗಿದ್ದು, ನಾನು ಬ್ಲಫ್‌ನಲ್ಲಿ ಹುಟ್ಟಿ ಬೆಳೆದಿರುತ್ತೇನೆ. ನಾನು ಬ್ಲಫ್‌ನಲ್ಲಿಯೇ ವಾಸವಿದ್ದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಲು ಆಗುವುದಿಲ್ಲ. ನಾನು ಬ್ಲಫ್‌ನಲ್ಲಿ ವಾಸವಿಲ್ಲದೇ ಇದ್ದ ಕಾರಣ ದಾಖಲೆಯನ್ನು ಹಾಜರುಪಡಿಸಲು ಸಾದ್ಯವಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಾನು ಬ್ಲಫ್‌ನಲ್ಲಿ ವಾಸವಿದ್ದರೆ ದಾಖಲೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ನಂತರ ಮಳವಳ್ಳಿಯಲ್ಲಿ ಮನೆ ಮಾಡಿ, ಬ್ಲಫ್‌ಗೆ ಕರ್ತವ್ಯಕ್ಕೆ ಹೋಗಿ ಬರುತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಕಾಲಕ್ಕೆ ಆರೋಪಿಯು

ಬ್ಲಫ್‌ನಲ್ಲಿ ಕನಕರಾಜುರವರ ಅಕ್ಕಪಕ್ಕದ ಮನೆಯಲ್ಲಿ ವಾಸವಿದ್ದರು. ನಾನು ಶಿಂಷಾದಲ್ಲಿ ಕರ್ತವ್ಯ ನಿರ್ವಹಿಸುವಾಗ ವಸತಿಗೃಹದಲ್ಲಿ ವಾಸವಾಗಿದ್ದೆ.

3. ನನಗೆ ಸೇರಿದಂತೆ ಹಲಸಹಳ್ಳಿ ಗ್ರಾಮದಲ್ಲಿ 2 ಎಕರೆ ಸ್ವಂತ ಜಮೀರು ಇರುತ್ತದೆ. ನಾನು ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆ. ನಾನು ಈಗ ಮಳವಳ್ಳಿಯ ಸ್ವಂತ ಮನೆಯಲ್ಲಿ ವಾಸವಿರುತ್ತೇನೆ. ಸದರಿ ಮನೆಯನ್ನು 1995ರಲ್ಲಿ ಕಟ್ಟಿಸಿರುತ್ತೇನೆ. ಸದರಿ ಕಾಲಕ್ಕೆ ಸಾಲ ಪಡೆದಿದ್ದೆ. ನಮ್ಮ ಕುಟುಂಬದಲ್ಲಿ ನಾನು ಮತ್ತು ನನ್ನ ಪತ್ನಿ ವಾಸವಾಗಿದ್ದು, ಮಕ್ಕಳು ಪ್ರತ್ಯೇಕವಾಗಿ ಇರುತ್ತಾರೆ. ನನ್ನ ಮಕ್ಕಳು ಸುಮಾರು 10 ವರ್ಷಗಳಿಂದಲೂ ಪ್ರತ್ಯೇಕವಾಗಿ ವಾಸವಿರುತ್ತಾರೆ. ನನಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬರು ಹೆಣ್ಣು ಮಗಳು ಇರುತ್ತಾರೆ. ನನ್ನ ಹಿರಿಯ ಮಗ ಮೃತರಾಗಿರುತ್ತಾರೆ. ನನ್ನ ಹಿರಿಯ ಮಗನ ಕುಟುಂಬದವರನ್ನು ನಾನೇ ನೋಡಿಕೊಳ್ಳಬೇಕು ಎಂದರೆ ಅವರಿಗೆ ಸ್ವಲ್ಪ ಹಣ ಬಂದಿದ್ದು, ನಾನೇ ನೋಡಿಕೊಳ್ಳುತ್ತಿದ್ದೇನೆ. ನಾನು ಮನೆ ಕಟ್ಟಿಸುವಾಗ ಹೆಚ್.ಡಿ,ಎಫ್.ಸಿ. ಬ್ಯಾಂಕ್‌ನಲ್ಲಿ 1,33,000/- ರೂಗಳನ್ನು ಸಾಲವಾಗಿ ಪಡೆದಿದ್ದೆ. ಕೆ.ಇ.ಬಿ.ಯಲ್ಲಿ ನಾವು ಒಂದು ಸಂಘವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದರಲ್ಲಿ ಸಹ ಸಾಲ ದೊರಕುತ್ತದೆ ಎಂದರೆ ಸರಿಯಲ್ಲ. ನಾನು ಚೀಟಿ ಹಾಕಿ, ಹಣವನ್ನು ಸಂಗ್ರಹಮಾಡಿದ್ದು, ಅದರಲ್ಲಿ ಮನೆ ಕಟ್ಟಲು ಖರ್ಚು ಮಾಡಿರುತ್ತೇನೆ. ಮನೆ ಕಟ್ಟಲು ಹಣ ಸಾಲದ ಕಾರಣ ನಾನು ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದೆ ಎಂದರೆ ಸರಿ. ನನ್ನ ಮತ್ತು ನನ್ನ ಮಕ್ಕಳ ವ್ಯವಹಾರ ಪ್ರತ್ಯೇಕವಾಗಿರುತ್ತದೆ ಎಂದರೆ ಸರಿ. ನಾನು ಬ್ಯಾಂಕ್‌ನಲ್ಲಿ ಸಾಲ ಪಡೆದಿರುವುದನ್ನು ಹೊರತುಪಡಿಸಿ, ಬೇರೆ ಕಡೆ ಸಾಲ ಮಾಡಿರುವುದಿಲ್ಲ.

4. ಆರೋಪಿಯು ನನ್ನ ಬಳಿ ಸಾಲ ಪಡೆದ ನಂತರ ನನಗೆ ಅವರು ಸಿಕ್ಕಿರುವುದಿಲ್ಲ. ಆರೋಪಿಯು ಸಾಲ ಕೇಳಲು ಕನಕರಾಜುರವರ ಜೊತೆ ಬಂದಿದ್ದರು. ಕನಕರಾಜು ಈ ದಿನ ಮೈಸೂರಿಗೆ ಹೋಗಿದ್ದು, ಆ ನಂತರ ನ್ಯಾಯಾಲಯದ ಬಳಿ ಬರುತ್ತಾರೆ. ಪ್ರಸ್ತುತ ಪ್ರಕರಣ ಇದ್ದ ದಿನಾಂಕದಂದು ಕನಕರಾಜುರವರು ನನ್ನ ಜೊತೆಯಲ್ಲಿ ನ್ಯಾಯಾಲಯಕ್ಕೆ ಬರುತ್ತಾರೆ ಎಂದರೆ ಸರಿ. ಆರೋಪಿಯು ಮನೆ ನಿರ್ಮಾಣ ಮಾಡುತ್ತಿದ್ದ ಬಗ್ಗೆ ನೋಡಿರುತ್ತೇನೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಆರೋಪಿಯ ಮನೆಗೆ ತಳಪಾಯ ಹಾಕಿದ್ದರು. ನಾನು ಸಾಲ ಕೊಟ್ಟ ನಂತರ ಆ ರೀತಿ ಆರೋಪಿಯ ಮನೆಯನ್ನು ನೋಡಲು ಹೋಗಿದ್ದೆ. ನನ್ನ ಜೊತೆ

ಕನಕರಾಜು ಸಹ ಬಂದಿದ್ದರು. ಆರೋಪಿಯು 15 ರಿಂದ 20 ದಿನಗಳ ಪೂರ್ವದಲ್ಲಿ ನನಗೆ ಹಣ ಕೇಳಿದ್ದರು. ಆರೋಪಿಯು 10 ಲಕ್ಷ ರೂಪಾಯಿಯನ್ನು ಸಾಲ ಕೇಳಿರುತ್ತಾರೆ. ಆ ರೀತಿ ಹಣ ಕೇಳಿದ್ದ ದಿನಾಂಕ ಗೊತ್ತಿರುವುದಿಲ್ಲ.

5. ನನಗೆ ವೇತನ ಹೊರತುಪಡಿಸಿ, ಬೇರೆ ಆದಾಯದ ಮೂಲ ಇರುವುದಿಲ್ಲ ಎಂದರೆ ಜಮೀನಿನಿಂದ ಆದಾಯ ಬರುತ್ತಿತ್ತು. ನಾನು ಬ್ಲಫ್‌ನಲ್ಲಿ 2 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತೇನೆ. ಸದರಿ ಜಮೀನಿನ ದಾಖಲೆಯನ್ನು ಹಾಜರುಪಡಿಸಲು ತಯಾರಿರುತ್ತೇನೆ. ಸರ್ಕಾರದಿಂದ ಬರುವ ಎಲ್ಲಾ ಸೌಲಭ್ಯಗಳು ನನ್ನ ಬ್ಯಾಂಕ್ ಖಾತೆಗೆ ಬರುತ್ತದೆ ಎಂದರೆ ಸರಿ. ನನ್ನ ಜೀವನಕ್ಕೆ ಅಗತ್ಯವಾಗಿರುವ ಹಣವನ್ನು ಮಾತ್ರ ನನ್ನ ಬ್ಯಾಂಕ್ ಖಾತೆಯಿಂದ ಡ್ರಾ ಮಾಡುತ್ತೇನೆ ಎಂದರೆ ಸರಿ. ನನ್ನ ಉಳಿತಾಯದ ಮೊತ್ತವು ನನ್ನ ಖಾತೆಯಲ್ಲಿಯೇ ಇರುತ್ತದೆ ಎಂದರೆ ಸರಿ. ನಾನು ಆರೋಪಿಗೆ ಸಾಲವನ್ನು ನಗದು ರೂಪದಲ್ಲಿಯೇ ನೀಡಿರುತ್ತೇನೆ. ನಾನು ಆ ರೀತಿ ಸಾಲ ನೀಡುವ ಕಾಲಕ್ಕೆ ನನ್ನ ಬ್ಯಾಂಕ್ ಖಾತೆಯಿಂದ ಹಣವನ್ನು ಡ್ರಾ ಮಾಡಿರುವುದಿಲ್ಲ. ನಾನು ಹಲಸಹಳ್ಳಿಯ ಜಮೀನನ್ನು ಮಾರಾಟ ಮಾಡಿದಾಗ 20 ಲಕ್ಷ ರೂಪಾಯಿ ಬಂದಿದ್ದು, ಅದರಲ್ಲಿ 10 ಲಕ್ಷ ರೂಪಾಯಿ ಖರ್ಚು ಮಾಡಿ, 10 ಲಕ್ಷ ರೂಪಾಯಿ ಉಳಿದಿತ್ತು. ನಾನು 2019ರಲ್ಲಿ ಹಲಸಹಳ್ಳಿಯ ಜಮೀನನ್ನು ಮಾರಾಟ ಮಾಡಿರುತ್ತೇನೆ. ನಾನು ಆ ರೀತಿ ಮಾರಾಟ ಮಾಡಿ ಬಂದ ಹಣವನ್ನು ನನ್ನ ಖಾತೆಗೆ ಜಮಾ ಮಾಡದೇ ಮನೆಯಲ್ಲಿ ಇಟ್ಟಿದ್ದೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಬ್ಯಾಂಕ್‌ನಲ್ಲಿ ಹಣವನ್ನು ಠೇವಣಿ ಇಟ್ಟರೆ ಬಡ್ಡಿ ಕೊಡುತ್ತಾರೆ ಎಂಬುದು ನನಗೆ ಗೊತ್ತಿರುತ್ತದೆ. ನಾನು ಮನೆಯಲ್ಲಿ ಹಣ ಇಟ್ಟುಕೊಂಡು ಬ್ಲಫ್‌ನ ಜಮೀನನ್ನು ಅಭಿವೃದ್ಧಿ ಪಡಿಸುವ ಯೋಜನೆಯನ್ನು ಹೊಂದಿದ್ದ ಕಾರಣ ಅದನ್ನು ಖಾತೆಗೆ ಜಮಾ ಮಾಡಿರಲಿಲ್ಲ. ನಾನು ಬ್ಲಫ್ ಜಮೀನಿನಲ್ಲಿ ಬೋರ್‌ವೆಲ್ ಹಾಕಿಸಿ, ಶೀಟಿನ ಮನೆಯನ್ನು ಮಾಡಿರುತ್ತೇನೆ. ಬೋರ್ ಹಾಕಿಸಲು ಸುಮಾರು ಎರಡುವರೆ ಲಕ್ಷ ರೂಪಾಯಿ ಖರ್ಚಾಗಿರುತ್ತದೆ ಎಂದರೆ ಸರಿ. 2019 ರಲ್ಲಿ ಆ ರೀತಿ ಬೋರ್‌ವೆಲ್ ಹಾಕಿಸಿದ್ದೆ. 7 ಲಕ್ಷ ರೂಪಾಯಿ ಖರ್ಚು ಮಾಡಿ, ಶೀಟಿನ ಮನೆಯನ್ನು 2019ರಲ್ಲಿಯೇ ಮಾಡಿಸಿರುತ್ತೇನೆ. ನಾನು ಬ್ಲಫ್‌ನಲ್ಲಿ 2 ಎಕರೆ ಸ್ವತ್ತನ್ನು 5 ಲಕ್ಷ ರೂಪಾಯಿಗಳಿಗೆ ಕ್ರಯಕ್ಕೆ ಪಡೆದಿರುತ್ತೇನೆ. ನನ್ನ ಹೆಸರಿಗೆ ಖಾತೆ ಆಗಿರುವುದಿಲ್ಲ.

6. ನಾನು ಸಾಲ ನೀಡಿದ ದಿನದಂದೇ ಆರೋಪಿಯು ಚೆಕ್‌ನ್ನು ನೀಡಿರುತ್ತಾರೆ. ನಾನು ಚೆಕ್‌ನ್ನು ಕೊಡುವಂತೆ ಕೇಳಿರುವುದಿಲ್ಲ. ಅವರೇ ಕೊಟ್ಟಿರುತ್ತಾರೆ. ಆರೋಪಿಯು ಒಂದು ಚೆಕ್‌ನ್ನು ಭರ್ತಿ ಮಾಡಿಕೊಂಡು ಬಂದಿದ್ದು, ನನ್ನ ಮುಂದೆ ಸಹಿ ಮಾಡಿರುತ್ತಾರೆ. 2 ತಿಂಗಳ ಒಳಗಾಗಿ ಸಾಲದ ಮೊತ್ತವನ್ನು ವಾಪಸ್ ಮಾಡುವುದಾಗಿ ಆರೋಪಿಯು ಹೇಳಿದ್ದರು. ಹಾರೋಹಳ್ಳಿ ಮನೆಯ ಕಟ್ಟಡದ ಕಾಮಗಾರಿ ಮುಕ್ತಾಯವಾದ ನಂತರ ಅದನ್ನು ಬಾಡಿಗೆಗೆ ನೀಡಿ, ಹಣವವನ್ನು ವಾಪಸ್ ಮಾಡುವುದಾಗಿ ಆರೋಪಿಯು ಹೇಳಿದ್ದರು. ನಾನು 2 ತಿಂಗಳು ಕಳೆದ ನಂತರ ಆರೋಪಿಗೆ ದೂರವಾಣಿ ಕರೆ ಮಾಡಿ ಕೇಳಿದ್ದು, ಆದರೆ ಅವರು ಸ್ಪಂದಿಸಿರುವುದಿಲ್ಲ. ನಾನು ಆರೋಪಿಯನ್ನು ಖುದ್ದಾಗಿ ಭೇಟಿ ಮಾಡಿರುವುದಿಲ್ಲ.

7. ಚೆಕ್ ಅಮಾನ್ಯಗೊಂಡಿದೆ ಎಂದು ಹಿಂಬರಹ ಬಂದ ನಂತರ ನಾನು ಆರೋಪಿಗೆ ನೋಟೀಸ್‌ನ್ನು ನೀಡಿದ್ದೆ. ಆರೋಪಿಯು ತನ್ನ ಮಕ್ಕಳ ಜೊತೆ ಜಗಳ ಮಾಡಿ, ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ಹೇಳಿದ ಮೇರೆಗೆ ಆರೋಪಿ ಮತ್ತು ಅವರ ಮಕ್ಕಳು ಪ್ರತ್ಯೇಕವಾಗಿ ಒಬ್ಬರ ತಂಟೆಗೆ ಮತ್ತೊಬ್ಬರು ಹೋಗದಂತೆ ವಾಸವಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಆರೋಪಿಯ ಮಕ್ಕಳ ಬಗ್ಗೆ ಗೊತ್ತಿರುವುದಿಲ್ಲ. ನಾನು ಆರೋಪಿಗೆ ಹಾರೋಹಳ್ಳಿ ವಿಳಾಸಕ್ಕೆ ನೋಟೀಸ್ ನೀಡಿದ್ದೆ. ಸದರಿ ನೋಟೀಸ್‌ನ್ನು ತಯಾರು ಮಾಡಲು ನಾನು ವಕೀಲರಿಗೆ ಮಾಹಿತಿ ನೀಡಿದ್ದೆ. ಆರೋಪಿಗೆ ವೀರಭದ್ರ ನಗರದ ವಿಳಾಸಕ್ಕೂ ಸಹ ನೋಟೀಸ್‌ನ್ನು ನೀಡಿದ್ದೆ. ಆರೋಪಿಗೆ ನೋಟೀಸ್ ಜಾರಿಯಾಗಿರುತ್ತದೋ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ. ರವಿ ಎಂದರೆ ಆರೋಪಿಯ ಮಗ ಆಗಿರುತ್ತಾರೆ. ಆರೋಪಿಯ ಮಗನ ವಿಳಾಸವನ್ನು ನಾನು ಪತ್ತೆ ಮಾಡಿರುತ್ತೇನೆ. ಬಿ.ಎಂ.ಟಿ.ಸಿ. ರವರಿಗೆ ಅರೋಪಿಯ ಮಗನ ವಿಳಾಸವನ್ನು ನೀಡುವಂತೆ ನೋಟೀಸ್ ನೀಡಿದ್ದೆವು. ಸದರಿ ನೋಟೀಸ್‌ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಯ 2 ವಿಳಾಸಗಳಲ್ಲಿ ಯಾವ ವಿಳಾಸಕ್ಕೆ ಜಾರಿಯಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಯ ಮಗನ ವಿಳಾಸಕ್ಕೆ ನೋಟೀಸ್ ಜಾರಿಯಾಗಿದ್ದು, ಮತ್ತೊಂದು ವಿಳಾಸಕ್ಕೆ ಜಾರಿಯಾಗದೇ ಇರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಗೆ ನೋಟೀಸ್ ಜಾರಿಯಾಗಿರುತ್ತದೆ. ಆರೋಪಿಯು ಮೊದಲು ಹಾರೋಹಳ್ಳಿಯಲ್ಲಿ ಇದ್ದು, ನಂತರ ವೀರಭದ್ರ ನಗರಕ್ಕೆ

ಹೋಗಿ ವಾಸವಿದ್ದರು. ನೋಟೀಸ್ ಜಾರಿಯಾದ್ದ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿಲ್ಲ ಎಂದರೆ ಗೊತ್ತಿರುವುದಿಲ್ಲ. ಆರೋಪಿಯ ಹಾರೋಹಳ್ಳಿ ವಿಳಾಸ ನನಗೆ ಮೊದಲಿನಿಂದ ಗೊತ್ತಿರುತ್ತದೆ. ಮುರುಗ ಮಾರಮ್ಮ ದೇವಸ್ಥಾನದ ರಸ್ತೆ ಎಂದು ಇಲ್ಲದೇ ಇದ್ದರೂ ನಾನು ಸುಳ್ಳು ವಿಳಾಸವನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದರೆ ನೋಟೀಸ್‌ನ್ನು ಯಾರು ಪಡೆದಿರುತ್ತಾರೆ ಎಂದು ಗೊತ್ತಾಗುತ್ತದೆ ಎಂದು ನಾನು ಅಂಚೆ ಇಲಾಖೆಯಲ್ಲಿ ಕೇವಲ ಹಿಂಬರಹವನ್ನು ಮಾತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಕನಕರಾಜುರವರಿಗೆ ಆರೋಪಿಯ ಮಕ್ಕಳ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿ. ಆರೋಪಿಯ ಮಗನ ವಿಳಾಸವನ್ನು ಸಹ ಕನಕರಾಜು ನನಗೆ ಮತ್ತು ನನ್ನ ವಕೀಲರಿಗೆ ಹೇಳಿರುತ್ತಾರೆ ಎಂದರೆ ಸರಿ. ಆರೋಪಿಗೆ ನೋಟೀಸ್ ಜಾರಿಯಾಗದೇ ಇರುವ ಕಾರಣ ಅವರು ಪ್ರತ್ಯುತ್ತರ ನೀಡಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ವಿಳಾಸವನ್ನು ಬದಲಾವಣೆ ಮಾಡಿ, ಆರ್.ಆರ್. ನಗರಕ್ಕೆ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ದೂರನ್ನು ಸಲ್ಲಿಸಿದ ನಂತರ ಆರೋಪಿಯು ಆರ್.ಆರ್. ನಗರದಲ್ಲಿ ವಾಸವಾಗಿರುವ ಬಗ್ಗೆ ತಿಳಿದುಬಂದಿರುತ್ತದೆ. ಆರೋಪಿಯು ತನ್ನ ಮನೆಯ ಗೃಹಪ್ರವೇಶಕ್ಕೆ ಕರೆದಿದ್ದು, ನನ್ನ ಅನಾರೋಗ್ಯದಿಂದ ನಾನು ಹೋಗಿರುವುದಿಲ್ಲ. ಆರೋಪಿಯ ಮನೆಯ ಗೃಹಪ್ರವೇಶವು ಯಾವಾಗ ಆಗಿದೆ ಎಂದರೆ ಅದು ಕನಕರಾಜುವಿಗೆ ಗೊತ್ತಿದ್ದು, ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ದೂರನ್ನು ಕನಕರಾಜು ಹಾಕಿಸಿರುತ್ತಾರೆ ಎಂದರೆ ಅವರೇ ಮಧ್ಯಸ್ಥಿಕೆ ವಹಿಸಿ ಹಾಕಿಸಿರುತ್ತಾರೆ.

8. ಆರೋಪಿಗೆ ಸೇರಿದಂತೆ ಬ್ಲಫ್‌ನಲ್ಲಿ ಜಾಗ ಇದೆ ಎಂದರೆ ಸರಿ. ಆರೋಪಿಯ ಮನೆಯ ಕಟ್ಟಡದ ವ್ಯವಹಾರವನ್ನು ಕನಕರಾಜು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಕನಕರಾಜು ಮತ್ತು ಆರೋಪಿಯು ಅಕ್ಕ ಪಕ್ಕದ ವಸತಿಗೃಹದವರು ಎಂದರೆ ಸರಿ. ಸದರಿಯವರು ಸ್ನೇಹಿತರು ಎಂದರೆ ಸರಿ. ಆರೋಪಿಯು ಹಾರೋಹಳ್ಳಿಯಲ್ಲಿ ವಾಸವಿದ್ದ ಕಾರಣ ಮನೆ ಕಟ್ಟಡದ ವ್ಯವಹಾರವನ್ನು ಕನಕರಾಜುವಿಗೆ ವಹಿಸಿದ್ದರು ಎಂದರೆ ಸರಿ. ಸದರಿ ಕಟ್ಟಡದ ಕೆಲಸಕ್ಕಾಗಿ ವಸ್ತುಗಳನ್ನು ಖರೀದಿ ಮಾಡಲು ಆರೋಪಿಯು

ಕನಕರಾಜುವಿಗೆ ಚೆಕ್ ನೀಡಿದ್ದರು ಎಂದರೆ ಅವರೇ ಬಂದು ಹಣವನ್ನು ನೀಡುತ್ತಿದ್ದ ಕಾರಣ ಚೆಕ್ ನೀಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಮಳವಳ್ಳಿ.